'ಕಟಕಿಯಲ್ಲಿ ಕುಳಿತು ಸಂತೆ ನೋಡುತ್ತಿದ್ದೆ. ಚಿಕ್ಕಪ್ಪ ಬಂದು ಚಂದ್ರನ್ ಕಳ್ಸಿ ಅಂದ್ರು. ಜೀಕೆ ಮೇಸ್ಟ್ರು ಕಳಿಸಿಕೊಟ್ರು. ಚಿಕ್ಕಪ್ಪನ ಕೈ ಹಿಡಿದು ಸಂತೆಗೆ ಹೋದೆ. ಸಂತೆ ಅಂದ್ರೆ ನಂಗಿಷ್ಟ. ಅರಿಸಿನ, ಕುಂಕುಮ, ಬಳೆ, ಗಂಧದ ಕಡ್ಡಿ, ಕರ್ಪೂರ, ಎಲೆ ಅಡಿಕೆ, ಬಾಳೆಹಣ್ಣು, ವಿಭೂತಿ ಕಟ್ಟು, ಬೆಲ್ಲದ ಅಚ್ಚು ತಗೊಂಡ್ರು. ನಂಗೆ ರವೆ ಉಂಡೆ ಕೊಡಿಸಿದ್ರು. ಅವ್ರ ಮುಖದಲ್ಲಿ ಖುಷಿ ಇತ್ತು. ಯಾಕ್ ಚಿಕ್ಕಪ್ಪ? ಅಂದೆ. ನಿನ್ಗೆ ಚಿಕ್ಕಮ್ಮ ಬರ್ತಿದಾಳ್ ಕಣೋ ಅಂದ್ರು.

ಇನ್ನೊಂದ್ ದಿನಾ ಚಿಕ್ಕಪ್ಪ ಬಂದ್ರು. ಎಚ್‌ಪಿ ಮೇಸ್ಟ್ರ ಕ್ಲಾಸು. ಚಂದ್ರನ್ ಕಳ್ಸಿ ಅಂದ್ರು. ಚಿಕ್ಕಪ್ಪನ ಕೈ ಹಿಡಿದು ಸಂತೆಗೆ ಹೋದೆ. ಯಾಕೆ ಅಂದ್ರೆ ಸಂತೆ ನನಗಿಷ್ಟ. ನಮ್ಮೂರ ಸಂತೆ ಮಹಾಭಾರತ ಇದ್ದ ಹಾಗೆ. ಅದೇ ಸಾಮಾನುಗಳನ್ನು ತಗೊಂಡ್ರು. ಆದ್ರೆ ನಂಗೆ ರವೆ ಉಂಡೆ ಕೊಡಿಸ್ಲಿಲ್ಲ. ಚಿಕ್ಕಪ್ಪ ಹ್ಯಾಪು ಮೋರೆ ಹಾಕ್ಕೊಂಡಿದ್ರು. ಯಾಕ್ ಚಿಕ್ಕಪ್ಪ ಅಂದೆ. ಹೆರಿಗೇಲಿ ನಿಮ್ಮ ಚಿಕ್ಕಮ್ಮ ತೀರ್‍ಕೊಂಡ್ಳು ಅಂದ್ರು.

ಮತ್ತೊಂದ್ ಶನಿವಾರ ಚಿಕ್ಕಪ್ಪ ಬಂದ್ರು. ಎನ್ನಾರ್ ಮೇಸ್ಟ್ರು ಸ್ವಾಮಿ ವಿವೇಕಾನಂದ ಮಾಡ್ತಿದ್ರು. ಚಂದ್ರನ್ ಕಳ್ಸಿ ಅಂದ್ರು. ಚಿಕ್ಕಪ್ಪನ ಕೈ ಹಿಡಿದು ಸಂತೆಗೆ ಹೋದೆ. ಅದೇ ಸಾಮಾನುಗಳನ್ನು ಕೊಂಡ್ರು. ನಂಗೂ ರವೆ ಉಂಡೆ ಕೊಡಿಸಿದ್ರು. ಅವ್ರ ಮುಖದಲ್ಲಿ ಖುಷಿ ಇತ್ತು. ಯಾಕ್ ಚಿಕ್ಕಪ್ಪ? ಅಂದೆ. ನಿಂಗೆ ಹೊಸಾ ಚಿಕ್ಕಮ್ಮ ಬರ್‍ತಿದಾಳೆ ಕಣೊ ಅಂದ್ರು.'

—ಎಂಟನೇ ತರಗತಿಯಲ್ಲಿದ್ದಾಗ ನಾನು ಬರೆದ ಮೊದಲ ಸಣ್ಣ ಕಥೆ ಇದು. ಹೆಸರು 'ಆವರ್ತ'. ಸಂಯುಕ್ತ ಕರ್ನಾಟಕ ಪತ್ರಿಕೆಯ ಭಾನುವಾರದ ಸಂಚಿಕೆಯಲ್ಲಿ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಸ್ಪರ್ಧೆಗೆ ಅಂತರ್ದೇಶೀಯ ಪತ್ರದಲ್ಲಿ ಬರೆದು ಹತ್ತು ರೂಪಾಯಿ ಬಹುಮಾನ ಗಳಿಸಿದ ಕಥೆ. ನಮ್ಮ ಮನೆಯಲ್ಲಿ ನಡೆದ ಘಟನೆಯನ್ನೇ ವಸ್ತುವಾಗಿಸಿ ಬರೆದದ್ದು. ಎಲ್ಲರೆದುರಿಗೆ ಕಥೆ ಓದಿಸಿ, ಮಧ್ಯಾಹ್ನ ಶಾಲೆಗೆ ರಜೆ ಕೊಟ್ಟು ಸಂಭ್ರಮಿಸಿದ್ದರು. ಜಾಸ್ತಿ ಕಥೆ ಬರಿ, ರಜ ಸಿಗುತ್ತೆ ಎಂದು ಸಹಪಾಠಿಗಳು ಪ್ರೋತ್ಸಾಹಿಸಿದ್ದರು. ಎಪ್ಪತ್ತರ ದಶಕದಲ್ಲಿ ಅಚ್ಚಾದ ನನ್ನ ಈ ಮೊದಲ ಕಥೆಯನ್ನು ನೀಗಿಕೊಂಡಿದ್ದೇನೆ. ಇಲ್ಲಿ ನೆನಪಿನ ಆಧಾರದಿಂದ ತದ್ರೂಪು ಮತ್ತೆ ಕಟ್ಟಿದ್ದೇನೆ.

★★★

ಮೊದಲ ಕಥಾಸಂಕಲನ 'ಹದ್ದುಗಳು' ಪ್ರಕಟವಾದಾಗ (1981) ನಾನು ಬಿ.ಎ ವಿದ್ಯಾರ್ಥಿ. ಮೈಸೂರಿನ ಮಹಾರಾಜಾ ಸಂಜೆ ಕಾಲೇಜು. ಕಾಕತಾಳೀಯ ಇರಲಾರದು; ಇಲ್ಲಿನ ಮೊದಲ ಕಥೆಯ ಹೆಸರು 'ಸಾವು ಮತ್ತು ಮದುವೆ'. ಸಾವು ಎಂಬುದು ನನ್ನನ್ನು ಬಾಲ್ಯದಿಂದ ಕಾಡಿರುವ ಸಂಗತಿ. ಬಾಲ್ಯದ ಗೆಳೆಯ ವಂದೂರು ಪುಟ್ಟಕ್ಕನ ಮಗ ಕೃಷ್ಣ ಒಂದು ಮುಸ್ಸಂಜೆ ಮಾರಮ್ಮನ ಗುಡಿ ಎದುರು ದೂಳಿನಲ್ಲಿ ಪಾದ ತೆವಳಿಸುತ್ತಾ ಆಟವಾಡುತ್ತಿದ್ದಾಗ ಸರ್ಪ ಕಚ್ಚಿ ನನ್ನೆದುರಿಗೇ ತೀರಿಕೊಂಡ. ಅದು ನನ್ನನ್ನೂ ಕಚ್ಚಬಹುದಿತ್ತು. ಆ ಮೇಲೆ ಚಿಕ್ಕಮ್ಮ. ಸಾಯುವುದರ ಬಗ್ಗೆ ನನಗೆ ಅಂಥ ತಕರಾರೇನೂ ಇರಲಿಲ್ಲ. ಆದರೆ, ಸತ್ತೇ ಹೋಗುವುದರ ಬಗೆಗಿತ್ತು. ಒಂದಾದರೂ ರೀವಿಸಿಟ್‌ಗೆ ಅವಕಾಶವಿರಬೇಕಿತ್ತು — ಅಂತ ನಾನು ಆಕಾರವಿಲ್ಲದ ಸಾವಿನೆದುರು ಆರೋಪಿಸುತ್ತಿದ್ದೆ. ದೇವರ ಹೆಸರೋ ಅಥವಾ ಪ್ರೇಮಿಯ ಹೆಸರೋ ಬರೆದುಕೊಳ್ಳುವ ಸ್ಕೂಟರ್ ಹಿಂಬದಿಯ ಸ್ಟೆಪ್ನಿಯ ಕವರ್ ಮೇಲೆ 'ಸಾವು' ಎಂದು ಬರೆದುಕೊಂಡು ಓಡಾಡುತ್ತಿದ್ದೆ. ಈಗಲೂ ನನ್ನ ಒಂದು ಗ್ರಹಿಕೆ: ಬದುಕು ಈ ಕ್ಷಣದ ಅಮೃತಾಕ್ಷರಗಳಿಂದ ಬರೆದ ನಾಳಿನ ನಶ್ವರಕೃತಿ. 'ಹದ್ದುಗಳು' ಕಥಾ ಸಂಕಲನಕ್ಕೆ 'ಪ್ರಜಾವಾಣಿ'ಯಲ್ಲಿ ವಿಮರ್ಶೆ ಬರೆಯುತ್ತಾ ಟಿ.ಪಿ. ಅಶೋಕರು 'ಇಲ್ಲಿ ಎದ್ದು ಕಾಣುವ ಗುಣವೆಂದರೆ ಭಾಷೆಯನ್ನು